# ಕರ್ನಾಟಕ ಸರ್ಕಾರ

## ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಇತರೆ ಪರೀಕ್ಷೆಗಳು

**ಮಲ್ಲೇಶ್ವರಂ 6ನೇ ಅಡ್ಡರಸ್ತೆ, ಬೆಂಗಳೂರು-560003**

**ಸಂಖ್ಯೆ: ಆರ್-1/ಪರೀಕ್ಷಾ ಕಾರ್ಯ-08/2020-21** **ದಿನಾಂಕ: 04-10-2021**

**ಸುತ್ತೋಲೆ**

**ವಿಷಯ:** ಜುಲೈ-2021ರ ಮಾಹೆಯಲ್ಲಿ ನಡೆದ ಅರೇಬಿಕ್ ಮುಖ್ಯ ಪರೀಕ್ಷೆಯ ಫಲಿತಾಂಶ ಪ್ರಕಟಣೆ ಕುರಿತು.

*******

ಜುಲೈ-2021ರ ಮಾಹೆಯಲ್ಲಿ ನಡೆದ ಅರೇಬಿಕ್ ಮುಖ್ಯ ಪರೀಕ್ಷೆಯ ಫಲಿತಾಂಶವನ್ನು **ದಿನಾಂಕ: 04-10-2021 ರಂದು ಅಪರಾಹ್ನ 4:00 ಗಂಟೆಗೆ** ಮಂಡಳಿಯ ಅಂತರ್ಜಾಲದಲ್ಲಿ ಪ್ರಕಟಿಸಲಾಗುವುದು. ಫಲಿತಾಂಶ ಪ್ರಕಟಣೆಯಾದ 15 ದಿನಗಳೊಳಗೆ ಫಲಿತಾಂಶ ತಿದ್ದುಪಡಿ ಇದ್ದಲ್ಲಿ ನಿಯಮಾನುಸಾರ ತಿದ್ದುಪಡಿ ಮಾಡಲಾಗುವುದು. ವಿಶೇಷ ಪರಿಸ್ಥಿತಿಯಲ್ಲಿ ಅಂದರೆ ಪರೀಕ್ಷೆಯ ದುರಾಚರಣೆ, ವಂಚನೆ, ಅನುಚಿತ ವರ್ತನೆ ಮೊದಲಾದವುಗಳಿಂದ ಪ್ರಭಾವಿತವಾಗಿದೆ ಎಂದು ಕಂಡುಬಂದಲ್ಲಿ ಅಂತಹ ಫಲಿತಾಂಶವನ್ನು ಫಲಿತಾಂಶ ಪ್ರಕಟವಾದ ನಂತರವೂ ನಿಯಮಾನುಸಾರ ಪರೀಕ್ಷಾ ಫಲಿತಾಂಶವನ್ನು ತಡೆಹಿಡಿಯುವ, ರದ್ದುಪಡಿಸುವ, ಮಾರ್ಪಡಿಸಿ ಪ್ರಕಟಿಸುವ ಅಧಿಕಾರವನ್ನು ಮಂಡಳಿ ಹೊಂದಿರುತ್ತದೆ.

**ಜುಲೈ-2021ರ ಅರೇಬಿಕ್ ಪರೀಕ್ಷೆಯ ಫಲಿತಾಂಶ ಪಟ್ಟಿಯನ್ನು ಮಂಡಳಿಯ ಜಾಲತಾಣದಲ್ಲಿ ಸಂಸ್ಥೆಯ ಲಾಗಿನ್ ಮೂಲಕ ಡೌನ್‌ಲೋಡ್ ಮಾಡಿಕೊಂಡು, ಈ ಕೆಳಕಂಡ ಅಂಶಗಳ ಆಧಾರದ ಮೇಲೆ ನಿಮ್ಮ ಸಂಸ್ಥೆಯ ಎಲ್ಲಾ ಅಭ್ಯರ್ಥಿಗಳ ಫಲಿತಾಂಶವನ್ನು ಮತ್ತು ಇತರೆ ಅಂಶಗಳನ್ನು ಕಡ್ಡಾಯವಾಗಿ ಪರಿಶೀಲಿಸಲು ತಿಳಿಸಿದೆ.**

1. ಜುಲೈ-2021ರ ಅರೇಬಿಕ್ ಪರೀಕ್ಷೆ ಬರೆದ ಎಲ್ಲಾ ಅಭ್ಯರ್ಥಿಗಳ ಫಲಿತಾಂಶ ಬಂದಿದೆಯೇ? ಎಂಬುದನ್ನು ಪರಿಶೀಲಿಸಿಕೊಳ್ಳುವುದು.

2. ಒಂದು ವೇಳೆ ಯಾವುದಾದರೂ **ಅಭ್ಯರ್ಥಿಗಳ ಫಲಿತಾಂಶ ಬಾರದಿದ್ದಲ್ಲಿ, ಫಲಿತಾಂಶ ತಡೆಹಿಡಿದಿದ್ದಲ್ಲಿ, ಫಲಿತಾಂಶ ಪ್ರಕಟಿಸಿದ 15 ದಿನಗಳೊಳಗಾಗಿ ಸಕಾರಣಗಳೊಂದಿಗೆ ಮಂಡಳಿಗೆ ಪತ್ರ ಬರೆದು ಫಲಿತಾಂಶ ಪಡೆದುಕೊಳ್ಳಲು ತಿಳಿಸಿದೆ.** ಫಲಿತಾಂಶ ಪ್ರಕಟಣೆಯಾಗಿ 15 ದಿನಗಳ ನಂತರ ಈ ಬಗ್ಗೆ ಯಾವುದೇ ಕೋರಿಕೆ ಬಂದಲ್ಲಿ ಅದನ್ನು ಸ್ವೀಕರಿಸಲಾಗುವುದಿಲ್ಲ. ಮುಂದಿನ ಆಗುಹೋಗುಗಳಿಗೆ ಸಂಸ್ಥೆಯ ಮುಖ್ಯಸ್ಥರೇ ಜವಾಬ್ದಾರರಾಗಿರುತ್ತಾರೆ.

3. ಅಭ್ಯರ್ಥಿಯ ಹೆಸರು, ತಂದೆಯ ಹೆಸರು, ತಾಯಿಯ ಹೆಸರು, ಜನ್ಮ ದಿನಾಂಕ ಇತ್ಯಾದಿ ಸಣ್ಣಪುಟ್ಟ ತಿದ್ದುಪಡಿಗಳಿದ್ದಲ್ಲಿ ಪ್ರಸ್ತಾವನೆಯನ್ನು ಪೂರಕ ದೃಢೀಕೃತ ದಾಖಲೆಗಳೊಂದಿಗೆ **ರೂ.200/- ದಂಡಶುಲ್ಕವನ್ನು** ಮಂಡಳಿಗೆ ಪಾವತಿಸಲಾಗಿರುವ NEFT Challan ಮೂಲ ಪ್ರತಿಯೊಂದಿಗೆ ಸಲ್ಲಿಸತಕ್ಕದ್ದು.

4. ಪ್ರಕಟಿಸಿದ ಫಲಿತಾಂಶ ತಾತ್ಕಾಲಿಕವಾಗಿದ್ದು, ಅಭ್ಯರ್ಥಿಗೆ ಮಂಡಳಿಯಿಂದ ನೀಡುವ ಅಂಕಪಟ್ಟಿಯು ಆಯಾ ಅಭ್ಯರ್ಥಿಯ ನೈಜ ಫಲಿತಾಂಶವನ್ನು ತಿಳಿಸುತ್ತದೆ. ಅಂದರೆ ಅಂಕಪಟ್ಟಿಯಲ್ಲಿ ನೀಡಿದ ದತ್ತಾಂಶಗಳೇ ಅಂತಿಮ ಎಂದು ಭಾವಿಸತಕ್ಕದ್ದು.

**ಸದರಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಛಾಯಾ ಪ್ರತಿಗಾಗಿ, ಮರುಎಣಿಕೆ ಹಾಗೂ ಮರುಮೌಲ್ಯಮಾಪನಕ್ಕಾಗಿ ಆನ್‌ಲೈನ್ ಮೂಲಕ ನಿಗಧಿತ ಅರ್ಜಿ ಸಲ್ಲಿಸುವ ವೇಳಾಪಟ್ಟಿ ಈ ಕೆಳಕಂಡಂತಿದೆ.**

| ವಿವರ | ದಿನಾಂಕ |
|---|---|
| ಜುಲೈ–2021ರ ಅರೇಬಿಕ್ ಪರೀಕ್ಷೆಯ ಉತ್ತರ ಪತ್ರಿಕೆಗಳ ಸ್ಕ್ಯಾನ್ ಪ್ರತಿಯನ್ನು ಪಡೆಯಲು ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ | **07–10–2021** |
| ಜುಲೈ–2021ರ ಅರೇಬಿಕ್ ಪರೀಕ್ಷೆಯ ಉತ್ತರ ಪತ್ರಿಕೆಗಳ ಸ್ಕ್ಯಾನ್ ಪ್ರತಿಯನ್ನು ಪಡೆಯಲು ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ | **13–10–2021** |
| ಜುಲೈ–2021ರ ಅರೇಬಿಕ್ ಪರೀಕ್ಷೆಯ ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನ/ಅಂಕಗಳ ಮರು ಎಣಿಕೆಗೆ ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ | **08–10–2021** |
| ಜುಲೈ–2021ರ ಅರೇಬಿಕ್ ಪರೀಕ್ಷೆಯ ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನ/ ಅಂಕಗಳ ಮರು ಎಣಿಕೆಗೆ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ | **18–10–2021** |

**ಮರು ಎಣಿಕೆಗೆ ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಸಂಬಂಧಪಟ್ಟ ವಿಷಯದ ಉತ್ತರ ಪತ್ರಿಕೆಯ ಛಾಯಾಪ್ರತಿಯನ್ನು ಪಡೆಯಬೇಕಾಗಿರುತ್ತದೆ. ನೇರವಾಗಿ ಮರು ಎಣಿಕೆಗಾಗಿ ಅರ್ಜಿ ಸಲ್ಲಿಸುವಂತಿಲ್ಲ. ಛಾಯಾಪ್ರತಿಯನ್ನು ಪಡೆದ ನಂತರ ಅಂಕಗಳ ಎಣಿಕೆಯಲ್ಲಿ ವ್ಯತ್ಯಾಸವಿದ್ದಲ್ಲಿ ಖಚಿತಪಡಿಸಿಕೊಂಡ ನಂತರವೇ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಿ ಸರಿಪಡಿಸಿಕೊಳ್ಳಬಹುದಾಗಿರುತ್ತದೆ. ಅಂಕಗಳ ಎಣಿಕೆಯಲ್ಲಿ ವ್ಯತ್ಯಾಸವಿದ್ದಲ್ಲಿ ಪರಿಶೀಲಿಸಿ ಮಂಡಳಿಯ ವೆಚ್ಚದಲ್ಲಿ ಪರಿಷ್ಕೃತ ಫಲಿತಾಂಶ ಪಟ್ಟಿಯನ್ನು ಸಂಬಂಧಿಸಿದ ಸಂಸ್ಥೆಗೆ ಹಾಗೂ ಈ ಬಗ್ಗೆ ಮಾಹಿತಿಯನ್ನು ಅಭ್ಯರ್ಥಿಗಳಿಗೆ ರವಾನಿಸಲಾಗುವುದು. ಹಾಗೂ ಮರುಎಣಿಕೆಯ ಅಂಕಗಳಲ್ಲಿ ವ್ಯತ್ಯಾಸವಿದ್ದರೆ ಶುಲ್ಕವನ್ನು ಅಭ್ಯರ್ಥಿಗಳಿಗೆ ಹಿಂದಿರುಗಿಸಲಾಗುವುದು.**

ಛಾಯಾ ಪ್ರತಿ ಹಾಗೂ ಮರುಮೌಲ್ಯಮಾಪನಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿದ್ದು, ಭೌತಿಕವಾಗಿ ಅರ್ಜಿಗಳನ್ನು ಸ್ವೀಕರಿಸುವುದನ್ನು ರದ್ದುಪಡಿಸಲಾಗಿದೆ. **ಮರುಎಣಿಕೆ ಅಥವಾ ಮರುಮೌಲ್ಯಮಾಪನ ಸೇವೆಯನ್ನು ಪಡೆಯಬೇಕಾದಲ್ಲಿ ಛಾಯಾಪ್ರತಿಯನ್ನು ಕಡ್ಡಾಯವಾಗಿ ಪಡೆಯಬೇಕಾಗಿರುತ್ತದೆ.** ಛಾಯಾಪ್ರತಿ ಮತ್ತು ಮರುಮೌಲ್ಯಮಾಪನಕ್ಕಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಮಂಡಳಿಯ ಜಾಲತಾಣ ವಿಳಾಸ https://sslc.karnataka.gov.inದಲ್ಲಿ ಲಭ್ಯವಿದ್ದು ಸದರಿ ಜಾಲತಾಣದಲ್ಲಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ನಂತರ ನಿಗದಿತ ಶುಲ್ಕವನ್ನು ಡೆಬಿಟ್ ಕಾರ್ಡ್/ಕ್ರೆಡಿಟ್ ಕಾರ್ಡ್ ಮೂಲಕ ಪಾವತಿಸಬಹುದಾಗಿದೆ. ಛಾಯಾಪ್ರತಿ/ಮರುಮೌಲ್ಯಮಾಪನಕ್ಕಾಗಿ ಮೇಲ್ಕಂಡಂತೆ ಅರ್ಜಿ ಸಲ್ಲಿಸಿದ ನಂತರ ಅರ್ಜಿ ಸ್ವೀಕಾರವಾದ ಬಗ್ಗೆ ನೊಂದಾಯಿಸಿದ ಮೊಬೈಲ್ ಸಂಖ್ಯೆಗೆ ಎಸ್‌ಎಂಎಸ್ ಮುಖಾಂತರ ಮಾಹಿತಿ ರವಾನೆಯಾಗುತ್ತದೆ.

ಮೇಲೆ ತಿಳಿಸಿರುವಂತೆ ಎಲ್ಲಾ ವಿಷಯಗಳ ಅಥವಾ ಅಪೇಕ್ಷಿತ ವಿಷಯದ ಛಾಯಾಪ್ರತಿ ಪಡೆದ ಅಭ್ಯರ್ಥಿಗಳು ಉತ್ತರ ಪತ್ರಿಕೆಯ ಅಂಕಗಳ ಮರುಎಣಿಕೆ/ಮರುಮೌಲ್ಯಮಾಪನಕ್ಕಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ನಿಗದಿಪಡಿಸಿರುವ ನಿಗಧಿತ ಶುಲ್ಕದೊಡನೆ ಅರ್ಜಿ ಸಲ್ಲಿಸಬೇಕು. ನಿಗಧಿತ ದಿನಾಂಕದ ನಂತರ ಮರುಮೌಲ್ಯಮಾಪನಕ್ಕಾಗಿ ಬರುವ ಅರ್ಜಿಗಳು ಆನ್‌ಲೈನ್‌ನಲ್ಲಿ ಸ್ವೀಕೃತವಾಗುವುದಿಲ್ಲ. **ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸುವ ಸಂಬಂಧ ಮಂಡಳಿಯ ಜಾಲತಾಣದಲ್ಲಿ ಫ್ಲೋ ಚಾರ್ಟ್‌ಅನ್ನು ಲಭ್ಯಮಾಡಲಾಗಿದೆ.**

| ಶುಲ್ಕದ ವಿವರ | |
|---|---|
| ಉತ್ತರ ಪತ್ರಿಕೆಗಳ ಛಾಯಾ ಪ್ರತಿ ಪಡೆಯಲು ಒಂದು ವಿಷಯಕ್ಕೆ ಶುಲ್ಕ | ರೂ. 500/- |
| ಮರುಮೌಲ್ಯಮಾಪನಕ್ಕೆ ಶುಲ್ಕ ಒಂದು ವಿಷಯಕ್ಕೆ | ರೂ. 800/- |
| ಉತ್ತರ ಪತ್ರಿಕೆಗಳ ಅಂಕಗಳ ಮರುಎಣಿಕೆಗಾಗಿ (ಒಂದು ವಿಷಯಕ್ಕೆ) | ರೂ. 150/- |

ಛಾಯಾ ಪ್ರತಿಯನ್ನು ಭೌತಿಕವಾಗಿ ಅಂಚೆ ಮೂಲಕ ಅರ್ಜಿಯಲ್ಲಿ ನಮೂದಿಸಿದ ವಿಳಾಸಕ್ಕೆ ರವಾನಿಸುವ ಕಾರ್ಯವನ್ನು ಕೈಬಿಡಲಾಗಿದೆ. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ **ಉತ್ತರ ಪತ್ರಿಕೆಗಳನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಲಾಗುವುದು.** ಉತ್ತರ ಪತ್ರಿಕೆಗಳನ್ನು ಅಪ್‌ಲೋಡ್ ಮಾಡಿದ ಮಾಹಿತಿಯನ್ನು ಅಭ್ಯರ್ಥಿಗಳು ಅರ್ಜಿಯಲ್ಲಿ ನೀಡಿರುವ ಮೊಬೈಲ್ ಸಂಖ್ಯೆಗೆ ಎಸ್.ಎಂ.ಎಸ್ ಮೂಲಕ ರವಾನಿಸಲಾಗುವುದು. ಸದರಿ ಮಾಹಿತಿಯ ಸ್ವೀಕೃತವಾದ ನಂತರ ಅಭ್ಯರ್ಥಿಗಳು ಉತ್ತರಪತ್ರಿಕೆಯನ್ನು ಮೇಲ್ಕಾಣಿಸಿದ ಜಾಲತಾಣದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಅಭ್ಯರ್ಥಿಗಳು ಉತ್ತರ ಪತ್ರಿಕೆಗಳ ಅಂಕಗಳ ಮರುಎಣಿಕೆ ಅಥವ ಮರುಮೌಲ್ಯಮಾಪನ ಅಪೇಕ್ಷಿಸಿದಲ್ಲಿ ಆನ್‌ಲೈನ್ ಮೂಲಕ ನಿಗಧಿತ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಬಹುದಾಗಿದೆ. ಮರುಎಣಿಕೆ ಅಥವ ಮರುಮೌಲ್ಯಮಾಪನದ ನಂತರ ಅಂಕಗಳ ಮಾಹಿತಿಯನ್ನು ನೊಂದಾಯಿತ ಮೊಬೈಲ್ ಸಂಖ್ಯೆಗೆ ಎಸ್‌ಎಂಎಸ್ ಮೂಲಕ ರವಾನಿಸಲಾಗುವುದು ಹಾಗೂ ಅಂಕಗಳಲ್ಲಿ ವ್ಯತ್ಯಾಸವಾದಲ್ಲಿ ಪರಿಷ್ಕೃತ ಫಲಿತಾಂಶಪಟ್ಟಿಯನ್ನು ಆಯಾ ಸಂಸ್ಥೆಗಳಿಗೆ ಕಳುಹಿಸಲಾಗುವುದು.

**ಜುಲೈ-21ರ ಅರೇಬಿಕ್ ಮುಖ್ಯ ಪರೀಕ್ಷೆಯ ಫಲಿತಾಂಶವನ್ನು** https://sslc.karnataka.gov.in **ಅಂತರ್ಜಾಲದಲ್ಲಿ ದಿನಾಂಕ:04-10-2021 .ರಂದು ಅಪರಾಹ್ನ 4:00 ಗಂಟೆಯ ನಂತರ ಪ್ರಕಟಿಸಲಾಗುವುದು.** ಸುತ್ತೋಲೆಯ ಜೆರಾಕ್ಸ್ ಪ್ರತಿಯನ್ನು ಮತ್ತು ಪರೀಕ್ಷಾ ಫಲಿತಾಂಶ ಪಟ್ಟಿಯನ್ನು ಡೌನ್-ಲೋಡ್ ಮಾಡಿಕೊಂಡು ಸಂಬಂಧಿಸಿದ ಅರೇಬಿಕ್ ಶಾಲಾ ಕಾಲೇಜುಗಳ ಸೂಚನಾ ಫಲಕದಲ್ಲಿ ದಿನಾಂಕ:05-10-2021ರಂದು ಪ್ರಕಟಿಸಲು ಸೂಚಿಸಿದೆ.

4/10/2021

(ಎಸ್.ಗೀತಾ)
**ನಿರ್ದೇಶಕರು**
**(ಇತರೆ ಪರೀಕ್ಷೆಗಳು)**

**ಪ್ರತಿಯನ್ನು:**

1. ರಾಜ್ಯದ ಸಂಬಂಧಿಸಿದ ಡಯಟ್ ಪ್ರಾಂಶುಪಾಲರಿಗೆ ಕಳುಹಿಸುತ್ತಾ, ಆಯಾ ಜಿಲ್ಲಾ ವ್ಯಾಪ್ತಿಗೆ ಸಂಬಂಧಿಸಿದ ಅರೇಬಿಕ್ ಶಾಲಾ/ಕಾಲೇಜುಗಳ ಮುಖ್ಯಸ್ಥರು ಸಂಸ್ಥೆಯ ಲಾಗಿನ್‌ನಲ್ಲಿ ಫಲಿತಾಂಶ ಪಟ್ಟಿ ಸಕಾಲದಲ್ಲಿ ಪಡೆದು ಪ್ರಕಟಿಸುವಂತೆ ಕ್ರಮವಹಿಸುವುದು.
2. ಗಣಕ ಶಾಖೆ, ಇತೆರೆ ಪರೀಕ್ಷ್ಗೆಗಳು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ.
3. ಕಛೇರಿ ಪ್ರತಿ.